ಈಗಿರುವ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಕಟ್ಟಡದಲ್ಲಿ ಸ್ಥಳಾಭಾವವಿದೆ ಎಂಬ ವರದಿಯು ಸರ್ಕಾರದ ಮುಂದಿಲ್ಲ. ಅಧಿಕ ಕೊಠಡಿಗಳನ್ನು ಒದಗಿಸುವ ಪ್ರಶ್ನೆಯನ್ನು ವಿದ್ಯಾರ್ಥಿಗಳ ಸಂಖ್ಯೆ ಹಾಗೂ ವಿಭಾಗಗಳ ಸಂಖ್ಯೆಯ ವರದಿಯನ್ನು ಪಡೆದು ನಂತರ ಪರಿಶೀಲಿಸಲಾಗುವುದು.

ಶ್ರೀ ಪಿ. ಬಸವರಾಜ್: ಮಾನ್ಯ ಅಧ್ಯಕ್ಷರೇ, ಡಾ. ಜಿ.ಎಸ್. ಆಚಾರ್ ಅವರ ಪರವಾಗಿ ಬೈಂದೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಗಿ ಸುಮಾರು 8-9 ವರ್ಷಗಳಾಯಿತು. ಆದರೆ ಇಲ್ಲಿಯವರೆಗೆ ಅದಕ್ಕೆ ಸ್ವಂತ ಕಟ್ಟಡವಿಲ್ಲ. ಈ ವರ್ಷ 6 ಕೋಣೆಗಳ ಒಂದು ಕಟ್ಟಡ ರಚನೆಯಾಗಿದೆ. ಆದರೆ ಇದೊಂದು ಕಾಲೇಜಾಗಿದ್ದು ಅದರಲ್ಲಿ ಬಿ.ಎ., ಬಿ.ಕಾಂ. ಕ್ಲಾಸ್‌ಗಳು ನಡೆಯುತ್ತಿರುವುದರಿಂದ ಈ ಕಾಲೇಜಿಗೆ ಕನಿಷ್ಟ 8-10 ಕೋಣೆಗಳ ಅವಶ್ಯಕತೆ ಇರುತ್ತದೆ. ಈಗಾಗಲೇ ಆಗಿರುವ ಕಟ್ಟಡದ ಉದ್ಘಾಟನೆಯನ್ನು ನಮ್ಮ ಮಾನ್ಯ ಮಂತ್ರಿಗಳೇ ಬರುವವರಿದ್ದಾರೆ. ಆದರೆ ಇನ್ನು ಮುಂದೆ ಬರುವ ಕಟ್ಟಡಗಳ ಕೆಲಸಗಳಿಗೆ ಹಣವನ್ನು ಆದಷ್ಟು ಜಾಗ್ರತೆಯಾಗಿ ಮಂಜೂರು ಮಾಡುತ್ತಾರೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಲ್ಲಿ 6 ಕೋಣೆಗಳ ಕಟ್ಟಡ ರಚನೆಯಾಗುತ್ತಿದೆ. ಅದು ಈ ತಿಂಗಳ ಅಂತ್ಯದಲ್ಲಿ ವಾಸಕ್ಕೆ ಯೋಗ್ಯವಾಗಿ ಈ ತಿಂಗಳ 31ನೇ ತಾರೀಖು ಉದ್ಘಾಟನಾ ಕಾರ್ಯಕ್ರಮವನ್ನು ಇಟ್ಟುಕೊಂಡಿರುತ್ತಾರೆ. ಎರಡನೆಯದಾಗಿ 1991-92ನೇ ವರ್ಷದಲ್ಲಿ ಈ ಬೈಂದೂರು ಕಾಲೇಜಿನ ಬಗ್ಗೆ ಸುಮಾರು ಒಂದು ಲಕ್ಷದ 20 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ಕಾಮಗಾರಿಯನ್ನು ಸಹ ತೆಗೆದುಕೊಳ್ಳುತ್ತೇವೆ.

ಚಿಕ್ಕಮಗಳೂರಿನಲ್ಲಿ ಬಾಲಕಿಯರ ಪ್ರೌಢಶಾಲೆ

1725 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಪಟ್ಟಣದಲ್ಲಿ ಬಾಲಕಿಯರ ಪ್ರೌಢಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರಕ್ಕೆ ಏನಾದರೂ ಬೇಡಿಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸಾರ್ಕ್ ಹೆಣ್ಣುಮಕ್ಕಳ ವರ್ಷವಾದ 1991-92ನೇ ಸಾಲಿನಲ್ಲಿ ಸರ್ಕಾರ ಈ ಬೇಡಿಕೆಯನ್ನು ಈಡೇರಿಸುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ನಾಲ್ಕು ಬಾಲಕಿಯರ ಪ್ರೌಢಶಾಲೆಗಳು ಇವೆ.

ಆ) ಇಲ್ಲ

ಇ) ಬೇಡಿಕೆ ಬಂದಲ್ಲಿ ಪರಿಶೀಲಿಸಲಾಗುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್: ಚಿಕ್ಕಮಗಳೂರು ಪಟ್ಟಣದಲ್ಲಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಹೆಣ್ಣುಮಕ್ಕಳ ಪ್ರೌಢಶಾಲೆಗಳು ಇರುವುದು ಸರಿ. ಆದರೆ ಸರ್ಕಾರದ ವತಿಯಿಂದ ಚಿಕ್ಕಮಗಳೂರಿನಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳು ಹೆಣ್ಣುಮಕ್ಕಳಿಗಾಗಿ ಇರುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಈ ಬಜೆಟ್ಟಿನಲ್ಲಿ ಹೆಣ್ಣುಮಕ್ಕಳಿಗಾಗಿ ಸರ್ಕಾರಿ ಪ್ರೌಢಶಾಲೆಯನ್ನು ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಚಿಕ್ಕಮಗಳೂರು ನಗರದಲ್ಲಿ ಈಗಾಗಲೇ 4 ಖಾಸಗಿ ಬಾಲಕಿಯರ ಪ್ರೌಢಶಾಲೆಗಳು ಇವೆ. ಸರ್ಕಾರದ ವತಿಯಿಂದ ಬಾಲಕಿಯರ

ಪ್ರೌಢಶಾಲೆಯನ್ನು ತೆರೆದು ನಡೆಸಬೇಕೆಂದು ಮನವಿ ಬಂದಿಲ್ಲ. ಮನವಿ ಬಂದಾಗ ಪರಿಶೀಲಿಸುತ್ತೇವೆಂದು ನಾವು ಉತ್ತರ ಕೊಟ್ಟಿದ್ದೇವೆ. ಆದರೆ 4 ಬಾಲಕಿಯರ ಪ್ರೌಢಶಾಲೆಗಳು ಈಗಾಗಲೇ ಇರುವುದರಿಂದ ಇದರ ಅವಶ್ಯಕತೆ ಇದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಆದರೆ ಮನವಿ ಬಾರದ ಕಾರಣ ನಾವು ಪರಿಶೀಲನೆ ಮಾಡಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: ಸರ್ಕಾರದ ಅನುದಾನ ಪಡೆಯುವಂತಹ ಖಾಸಗಿ ಹೆಣ್ಣುಮಕ್ಕಳ ಪ್ರೌಢಶಾಲೆಗೆ ಅನುಮತಿ ಕೊಟ್ಟಿರುವುದು ಬಹುಶಃ ಹತ್ತು ವರ್ಷಗಳ ಹಿಂದೆ ಎಂದು ನನ್ನ ಗಮನಕ್ಕೆ ಬಂದಿದೆ. ದಿನನಿತ್ಯ ಚಿಕ್ಕಮಗಳೂರು ಪಟ್ಟಣದಲ್ಲಿ ಜನಸಂಖ್ಯೆ ಬೆಳೆಯುತ್ತಿರುವ ಕಾರಣ ಅಲ್ಲಿ ಹೆಣ್ಣು ಮಕ್ಕಳಿಗೆ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಶಾಸಕರು ವಿಧಾನಸಭೆಯಲ್ಲಿ ಬೇಡಿಕೆ ಇಡತಕ್ಕದ್ದು ಸರಿ. ಸರ್ಕಾರಿ ಮತ್ತು ಖಾಸಗೀ ಪ್ರೌಢಶಾಲೆಗಳನ್ನು ಪ್ರಾರಂಭಿಸುವುದಕ್ಕೆ ನಾವು ಕೆಲವು ಮಾರ್ಗದರ್ಶನ ಕೊಟ್ಟಿದ್ದೇವೆ. ಇತ್ತೀಚೆಗೆ ಅದನ್ನು ಪುನರ್‌ಪರಿಶೀಲನೆ ಮಾಡಿ ಹೊಸ ನೀತಿಗಳನ್ನು ರೂಪಿಸಿ ಕಳುಹಿಸಿದ್ದೇವೆ. ಆ ದೃಷ್ಟಿಯಲ್ಲಿ ಆ ಹೊಸ ನೀತಿಗೆ ಅನುಗುಣವಾಗಿ ಅಲ್ಲಿ ಬೇಕಾದಂತಹ ಸವಲತ್ತು ಮತ್ತು ಅದಕ್ಕೆ ಬೇಕಾದ ಅರ್ಜಿಯನ್ನು ಕಳುಹಿಸಿದ್ದರೆ ಆಗ ಪರಿಶೀಲಿಸಲಾಗುತ್ತದೆ.

ಶ್ರೀಮತಿ ಮೋಟಮ್ಮ: ಈ ವರ್ಷ ಸರ್ಕಾರ ಹೆಣ್ಣುಮಕ್ಕಳಿಗಾಗಿ ಎನ್ನುವ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ? ಪ್ರಶ್ನೆಯಲ್ಲಿ ಕೂಡ ಹೇಳಿದ್ದಾರೆ ಇದು ಸಾರ್ಕ್ ಹೆಣ್ಣುಮಕ್ಕಳ ವರ್ಷ ಎಂದು. ಈ ವರ್ಷ ಹೆಣ್ಣುಮಕ್ಕಳ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುವುದಾದರೆ, ಚಿಕ್ಕಮಗಳೂರಿಗೆ ಬಾಲಕಿಯರ ಪ್ರೌಢಶಾಲೆಯನ್ನು ಕೊಡಬೇಕೆಂದು ಒತ್ತಾಯಿಸುತ್ತೇನೆ. ಇದು ಸಾರ್ಕ್ ಹೆಣ್ಣು ಮಕ್ಕಳ ವರ್ಷವಾದುದರಿಂದ 91-92ನೇ ಸಾಲಿನಲ್ಲಿ ಹೆಣ್ಣು ಮಕ್ಕಳ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಎಷ್ಟು ಬೇಡಿಕೆಗಳು ಬಂದಿದೆ? ಆ ಬೇಡಿಕೆಗಳನ್ನು ಕನ್ಸಿಡರ್ ಮಾಡಿ ಎಷ್ಟು ಶಾಲೆಗಳನ್ನು ಪ್ರಾರಂಭಿಸುತ್ತೀರಿ? ಹಾಗೆ ಪ್ರಾರಂಭಿಸುವಾಗ ಚಿಕ್ಕಮಗಳೂರು ಕೇಂದ್ರ ಸ್ಥಳವಾಗಿರುವುದರಿಂದ, ಅಲ್ಲಿ ಒಂದು ಶಾಲೆಯನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ: ಇವತ್ತು ಶ್ರೀಮತಿ ಮೋಟಮ್ಮನವರ ಜನ್ಮದಿನ. ಇವತ್ತು ಅವರು ಗಂಡುಮಕ್ಕಳನ್ನು ಹೆಣ್ಣುಮಕ್ಕಳಿಂದ ಎತಕ್ಕೆ ದೂರ ಓಡಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೋ ಗೊತ್ತಿಲ್ಲ. ಆದರೆ 1991-92ನೇ ಸಾಲಿನಲ್ಲಿ ಎಷ್ಟು ಬಾಲಕಿಯರ ಪ್ರೌಢಶಾಲೆಗಳನ್ನು ಮಾಡುತ್ತೀರೆಂದು ಕೇಳಿದ್ದಾರೆ. ಅದು ಅವಶ್ಯಕತೆ, ಬೇಡಿಕೆ ಇದನ್ನು ಹೊಂದಿರುತ್ತದೆ. ಆದುದರಿಂದ ಇಂತಿಷ್ಟೇ ಶಾಲೆಗಳನ್ನು ಈ ವರ್ಷದಲ್ಲಿ ಮಾಡುತ್ತೇವೆಂದು ಹೇಳುವುದು ಕಷ್ಟ. ಪ್ರೌಢಶಾಲೆ ಬಾಲಕಿಯರದ್ದು ಇರಬಹುದು, ಸಂಯುಕ್ತವಾಗಿ ಇರಬಹುದು, ಅದನ್ನು ಈಗ ಹೇಳುವುದಕ್ಕೆ ಬರುವುದಿಲ್ಲ. ಆ ಬೇಡಿಕೆಗಳನ್ನು ಹೊಂದಿಕೊಂಡು ನಾವು ಮಂಜೂರು ಮಾಡಬೇಕಾಗಿದೆ. ಅವಶ್ಯಕತೆ ಇದ್ದರೆ ಬಾಲಕಿಯರ ಪ್ರೌಢಶಾಲೆಗಳನ್ನು ತೆರೆಯುವುದಕ್ಕೆ ನಾವು ಹಿಂದುಮುಂದು ನೋಡುವುದಿಲ್ಲ. ಆ ಬೇಡಿಕೆಗೆ ಸ್ಪಂದಿಸಲು ನಾವು ಯಾವಾಗಲೂ ಸಿದ್ಧರಿದ್ದೇವೆ. ಆದುದರಿಂದ ಚಿಕ್ಕಮಗಳೂರು ನಗರಕ್ಕೆ ಸೀಮಿತವಾಗಿ 4 ಬಾಲಕಿಯ ಪ್ರೌಢಶಾಲೆಗಳು ಈಗಾಗಲೇ ಇವೆ. ಇನ್ನೊಂದು ಶಾಲೆಯ ಅವಶ್ಯಕತೆ ಇದೆಯೇ ಇಲ್ಲವೇ ಎಂದು ತಾವು ಮತ್ತು ಸಗೀರ್ ಅವರು ಆಲೋಚಿಸಿ ಬಂದು ನಮ್ಮ ಹತ್ತಿರ ಆ ವಿಚಾರ ಚರ್ಚೆ ಮಾಡಿದರೆ ಅಲ್ಲಿ ಶಾಲೆ ಆಗಲೇ ಆಗಬೇಕೆಂದರೆ ಮಾಡಲಿಕ್ಕೇನು ತೊಂದರೆ ಇಲ್ಲ. ಆ ಬಗ್ಗೆ ಪ್ರಯತ್ನ ಮಾಡೋಣ.

ಶ್ರೀಮತಿ ಮೋಟಮ್ಮ: ಪ್ರೈವೇಟ್ ಶಾಲೆ ಎಂದರೆ ಫೀಸ್ ಕೊಟ್ಟು ಓದುವುದಕ್ಕೆ ಸಾಧ್ಯವಾಗುವವರು ಮಾತ್ರ ಓದುತ್ತಾರೆ. ಸರ್ಕಾರಿ ಶಾಲೆ ಎಂದರೆ ಬಡ ಹೆಣ್ಣು ಮಕ್ಕಳಿಗೆ ಸಹಾಯವಾಗುತ್ತದೆ.

ಅಧ್ಯಕ್ಷರು: ಬರೆದು ಕಳುಹಿಸಿ, ಅವರು ಮಾಡಿಕೊಡುತ್ತಾರೆ.

ಕರ್ನಾಟಕದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯಗಳು

1640 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಿವೆ?

ಆ) ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ಯಾರು ಯಾರು ನಡೆಸುತ್ತಿರುವವರು?

ಇ) ಈ ಸಂಸ್ಥೆಗಳ ಅಧ್ಯಕ್ಷರುಗಳು ಯಾರು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ವೈದ್ಯಕೀಯ ಕಾಲೇಜು 4

ಖಾಸಗಿ ವೈದ್ಯಕೀಯ ಕಾಲೇಜು 14

18

(ಆ) ಮತ್ತು (ಇ) ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಿದೆ (ಅನುಬಂಧ-1)

ಅನುಬಂಧ - 1

ಖಾಸಗೀ ವೈದ್ಯಕೀಯ ಕಾಲೇಜಿನ ಹೆಸರು : ನಡೆಸುತ್ತಿರುವವರು ಮತ್ತು ಅಧ್ಯಕ್ಷರ ವಿವರಣೆಯನ್ನು ನಮೂದಿಸುವ ಪಟ್ಟಿ.

ಕ್ರ. ಸಂ	ವೈದ್ಯಕೀಯ ಕಾಲೇಜಿನ ಹೆಸರು	ಕಾಲೇಜನ್ನು ನಡೆಸುತ್ತಿರುವವರ ಹೆಸರು	ಅಧ್ಯಕ್ಷರ ಹೆಸರು
1.	ಕೆ.ಎಂ.ಸಿ. ಮಂಗಳೂರು ಕೆ.ಎಂ.ಸಿ. ಮಣಿಪಾಲ್	ಟಿ.ಎಂ.ಎ.ಪೈ ಫೌಂಡೇಷನ್ ಮಣಿಪಾಲ್	ಶ್ರೀ ರಾಮದಾಸ್ ಪೈ ಅದೇ
2.	ಸೈಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	ಸಿ.ಬಿ.ಸಿ.ಐ. ಸೊಸೈಟಿ ಫಾರ್ ಮೆಡಿಕಲ್ ಎಜುಕೇಷನ್	ಡಾ. ಪೆರಸಿವಲ್ ಫರ್ನಾಂಡಿಸ್
3.	ಜಿ.ಎನ್. ಮೆಡಿಕಲ್ ಕಾಲೇಜು, ಬೆಳಗಾಂ.	ಕೆ.ಎಲ್.ಇ. ಸೊಸೈಟಿ, ಬೆಳಗಾಂ.	ಶ್ರೀ ಪ್ರಭಾಕರ್ ಕೋರೆ, ಎಂ.ಪಿ.
4.	ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	ಹೆಚ್.ಕೆ.ಇ. ಸೊಸೈಟಿ, ಗುಲ್ಬರ್ಗಾ	ಡಾ. ಬಿ.ಜಿ. ಜವಳಿ, ಎಂ.ಪಿ.
5.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	ಬಾಪೂಜಿ ಎಜುಕೇಷನ್ ಟ್ರಸ್ಟ್, ದಾವಣಗೆರೆ	ಶ್ರೀ ಎಸ್. ಶಿವಪ್ಪ